# ಮಂಗಳೂರು ವಿಶ್ವವಿದ್ಯಾನಿಲಯ

ಮಂವಿ/ಆಡಳಿತ/ವಾ.ವಿಲೇವಾರಿ/33/2016–17/ಬಿ3

ಕುಲಸಚಿವರ ಕಚೇರಿ
ಮಂಗಳಗಂಗೋತ್ರಿ–574199
ದಿನಾಂಕ 30.09.2021

## ಬಹಿರಂಗ ಹರಾಜು ಪ್ರಕಟಣೆ (3ನೇ ಕರೆ)

ಮಂಗಳೂರು ವಿಶ್ವವಿದ್ಯಾನಿಲಯದ ಈ ಕೆಳಗೆ ಕಾಣಿಸಿದ ವಾಹನವನ್ನು **ದಿನಾಂಕ 12.10.2021 ರಂದು ಪೂರ್ವಾಹ್ನ 12.00 ಗಂಟೆಗೆ** ಆಡಳಿತ ಸೌಧ, ಮಂಗಳೂರು ವಿಶ್ವವಿದ್ಯಾನಿಲಯ ಇಲ್ಲಿ ಬಹಿರಂಗ ಹರಾಜು ಮಾಡಲಾಗುವುದು. ಆಸಕ್ತರು ಸಮಯಕ್ಕೆ ಸರಿಯಾಗಿ ಹಾಜರಿದ್ದು ರೂ.5,000/–ರ ಇಡುಗಂಟನ್ನು "ಹಣಕಾಸು ಅಧಿಕಾರಿ" ಮಂಗಳಗಂಗೋತ್ರಿ ಎಂಬ ಪದನಾಮ" ವಿರುವ ಬೇಡಿಕೆ ಹುಂಡಿಯೊಂದಿಗೆ (DD) ಹರಾಜಿನಲ್ಲಿ ಭಾಗವಹಿಸಬಹುದಾಗಿದೆ. ಯಶಸ್ವೀ ಬಿಡ್ಡುದಾರರ ಇಡುಗಂಟನ್ನು ಹೊರತುಪಡಿಸಿ ಉಳಿದವರ ಇಡುಗಂಟನ್ನು ಸ್ಥಳದಲ್ಲಿಯೇ ಹಿಂದಿರುಗಿಸಲಾಗುವುದು.

| ವಾಹನ ಮತ್ತು ಮಾದರಿ | ನೋಂದಣಿ ಸಂಖ್ಯೆ | RTO ನಿಗದಿಪಡಿಸಿದ ದರ |
|---|---|---|
| Ford Icon Car 1.3 FLAIR (Petrol) Model 2005 | KA 19P 3267 | 36,450/- |

ಷರತ್ತು:

1. ವಾಹನವನ್ನು ಕಚೇರಿ ಸಮಯದಲ್ಲಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಯವರ ಅನುಮತಿ ಪಡೆದು ಕಛೇರಿ ಸ್ಥಳದಲ್ಲಿ ಪರಿಶೀಲಿಸಬಹುದು.
2. ಇದಕ್ಕೆ ಸಂಬಂಧಪಟ್ಟಂತೆ ಇನ್ನಿತರ ಮಾಹಿತಿಯನ್ನು ಕಚೇರಿ ಸಮಯದಲ್ಲಿ ಬಂದು ಪಡೆದುಕೊಳ್ಳುವುದು.
3. ಸ್ಥಿರವಾದವರು ಹೊರತು ಉಳಿದೆಲ್ಲ ಬಿಡ್ಡುದಾರರಿಗೆ ಠೇವಣಿಯನ್ನು ಹಿಂದಿರುಗಿಸಲಾಗುವುದು. ಸ್ಥಿರವಾದವರು ಬಿಡ್ಡಿನ ಶೇಕಡಾ 50 ಭಾಗ ಮೊತ್ತವನ್ನು ಹರಾಜು ಮುಗಿದ ಕೂಡಲೇ ಪಾವತಿಸತಕ್ಕದ್ದು. ತಪ್ಪಿದಲ್ಲಿ ಠೇವಣಿಯನ್ನು ಮುಟ್ಟುಗೋಲು ಹಾಕಿ ಮರು ಹರಾಜು ಮಾಡಲಾಗುವುದು.
4. ಹರಾಜು ಸ್ಥಿರವಾದವರು ಮುರುದಿನವೇ ಬಿಡ್ಡಿನ ಉಳಿದ ಮೊತ್ತ ಮತ್ತು ಬಿಡ್ಡಿನ ಮೊತ್ತಕ್ಕೆ ಅನ್ವಯಿಸುವ ಎಲ್ಲಾ ತೆರಿಗೆಗಳೊಂದಿಗೆ (ಚಾಲ್ತಿಯಲ್ಲಿರುವ) ಪೂರ್ಣ ಮೊತ್ತವನ್ನು ಪಾವತಿಸಬೇಕಿದೆ. ಹಾಗೂ ಈ ಬಗ್ಗೆ ರೂ.100/–ರ ಛಾಪಾ ಕಾಗದದಲ್ಲಿ ವಿಶ್ವವಿದ್ಯಾನಿಲಯದ ಕರಾರುಗಳಿಗೆ ಒಪ್ಪಿ ಕರಾರು ಪತ್ರವನ್ನು ಮಾಡಿಕೊಡಬೇಕಾಗುತ್ತದೆ. ತಪ್ಪಿದಲ್ಲಿ ಈಗಾಗಲೇ ಪಾವತಿಸಿರುವ ಠೇವಣಿ ಹಣವನ್ನು ಮುಟ್ಟುಗೋಲು ಹಾಕಲಾಗುವುದು.
5. ಹರಾಜನ್ನು ಮುಂದೂಡುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಈ ಕೆಳಗೆ ಸಹಿ ಮಾಡಿದವರು ಕಾಯ್ದಿರಿಸಿದ್ದಾರೆ. ಎಲ್ಲಾ ವಿಚಾರಗಳಲ್ಲಿಯೂ ವಿಶ್ವವಿದ್ಯಾನಿಲಯದ ತೀರ್ಮಾನವೇ ಅಂತಿಮವಾಗಿರುತ್ತದೆ.
6. ಈ ಮೇಲಿನ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ವಿಶ್ವವಿದ್ಯಾನಿಲಯವು ತೆಗೆದುಕೊಳ್ಳುವ ನಿರ್ಧಾರವೇ ಅಂತಿಮವಾಗಿರುತ್ತದೆ ಮತ್ತು ಅದಕ್ಕೆ ಬಿಡ್ಡುದಾರರು ನೇರ ಜವಾಬ್ದಾರರಾಗಿರುತ್ತಾರೆ.
7. ಬಿಡ್ಡುದಾರರು RTO ನಿಗದಿಪಡಿಸಿದ ದರಕ್ಕಿಂತ ಕಡಿಮೆ ದರ ಸೂಚಿಸಿದಲ್ಲಿ ಬಿಡ್ಡನ್ನು ತಿರಸ್ಕರಿಸಲಾಗುವುದು.

ಕುಲಸಚಿವರು